MVC No.256/2021 PW-1

**<u>ದಿನಾಂಕ 26.10.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಖ್ಯ ವಿಚಾರಣೆ ಃಅರ್ಜಿದಾರರ ಪರ ಶ್ರೀ ಟಿ ಎ ಎಸ್ ವಕೀಲರಿಂದ ಃ</u>

ನಾನು ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಪ್ರಥಮ ವರ್ತಮಾನ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ದೂರಿನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಮಾಲುಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು, ಸ್ಥಳ ಮಹಜರನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು, ಮಾಲುಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ಅಮಾನತ್ತು ಮಹಜರನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ದೋಷಾರೋಪಣಾ ಪಟ್ಟಿಯ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು, ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, 5 ಜನ ಸಾಕ್ಷಿದಾರರುಗಳ ಹೇಳಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-9 ಎಂದು, ಕಲಂ 133 ರ ಐ ಎಂ ವಿ ಆಕ್ಟ್ ರಡಿಯಲ್ಲಿ ವಾಹನದ ಮಾಲೀಕರಿಗೆ ನೀಡಿದ ನೋಟೀಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ಎಂದು, ವಾಹನದ ಮಾಲೀಕರಾದ ಗಂಗಮ್ಮರವರು ನೀಡಿರುವ ಹೇಳಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-11 ಎಂದು, ಶೋಭ ರವರಿಗೆ ನೀಡಿರುವ ಪೋಲಿಸ್ ನೋಟೀಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-12 ಎಂದು, 2 ವಾಹನ ತಪಾಸಣಾ ವರದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-13 ಮತ್ತು ನಿಪಿ-14 ಎಂದು, ವೈದ್ಯಕೀಯ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು

ಒಟ್ಟಾರೆಯಾಗಿ ನಿಪಿ-15 ಎಂದು, 3,46,201/- ರೂಗಳಿಗೆ ಸಂಬಂದಿಸಿದ 27 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ-16 ಎಂದು, ಗುರುತಿಸಲಾಯಿತು.

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ವಕೀಲರಿಂದ ಃ</u>

ಎದುರುದಾರರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ಶುಭಾ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.